

ಮತ್ತು ಜನ ಅವುಗಳನ್ನು ಓದುತ್ತಿದ್ದುದು ರಷ್ಯಾದ ದೀರ್ಘ ಕಾಲದ ಭಯಂಕರ ಚಳಿಗಾಲವನ್ನು ಹೋಗಲಾಡಿಸಲು ಎಂಬ ವಿಷಯವನ್ನು ಈ 21ನೇ ಶತಮಾನದಲ್ಲಿ ಅಕ್ಷರಶಃ ಅನುಭವಿಸಬೇಕೆಂದು ಚಳಿಗಾಲದ ಉತ್ತುಂಗದ ಸ್ಥಳಗಳಲ್ಲೊಂದಾದ ಸ್ವಾಲ್‌ಬಾಡ್‌ಗೆ ಟಾಲ್‌ಸ್ಟಾಯ್‌ನ ಆ ಕಾದಂಬರಿಯನ್ನು ಹೊತ್ತು ತಂದಿದ್ದಳು. ಮೊದಲ ಎರಡು ಅಧ್ಯಾಯಗಳಷ್ಟೇ ಅವಳ ಕಣ್ಣುಗಳಿಗೆ ಹಿತವಾಗಿದ್ದವು. ಮೂರನೇ ಅಧ್ಯಾಯಕ್ಕೆ ಹೋಗಲೇ ತಿಣುಕಾಡಿ ಮಂಚದ ಮೇಲೆ ಅದನ್ನು ತನ್ನೊಂದಿಗೆ ಮಲಗಿಸಿಕೊಂಡಿದ್ದಾಳೆ. ಬೇಸರವಾದಾಗಲೆಲ್ಲ ಒಂದೆರೆಡು ಪುಟಗಳನ್ನು ತಿರುವಿಹಾಕುತ್ತಾಳೆ. ಆಮೇಲೆ ಹಾಗೇ ಮಲಗುತ್ತಾಳೆ, ಟಿವಿ ನೋಡುತ್ತಾಳೆ, ಜೊತೆಗೆ ಸೋಷಿಯಲ್ ಮೀಡಿಯಾ... ಸ್ನಾನ ಮಾಡಿ ಎಷ್ಟೋ ಬಾರಿ ಹಾಗೆ ನಗ್ನವಾಗಿಯೇ ಮಂಚದ ಮೇಲೆ ಮಲಗಿ ನಿದ್ರೆ ಮಾಡಿದ್ದಾಳೆ. ರೂಮಿನ ಹೀಟರ್ ಒಮ್ಮೊಮ್ಮೆ ಕೈಕೊಟ್ಟು ಅವಳನ್ನು ಚಳಿಯಲ್ಲಿ ನಡುಗಿಸಿದೆ. ಹೊರಗೆ ಹೋಗಿ ಬೆಳಿಗ್ಗೆಯೆಂಬ ಕತ್ತಲಲ್ಲಿ ಅಡ್ಡಾಡಿ ಅಡುಗೆಗಾಗಿ ವಸ್ತು, ತರಕಾರಿ ಖರೀದಿಸಿ ಬರುತ್ತಾಳೆ. ಆರು ತಿಂಗಳುಗಳ ಕಾಲ ಹೀಗೆ ಸೂರ್ಯನೇ ಇಲ್ಲದೆ ಬದುಕುವುದು ಎಷ್ಟು ಮಜಾ ಎಂದೂ ಅವಳಿಗೆ ಅನ್ನಿಸಿದೆ. ಮಾಸ್ಕೋಗೆ ಹೋಲಿಸಿದರೆ ಇಲ್ಲಿ ಜನಜೀವನ ದುಬಾರಿಯೇನಲ್ಲ. ತನ್ನ ಮಗಳನ್ನು ಕರೆದುಕೊಂಡು ಬಂದು ಇಲ್ಲೇ ನೆಲಸಿಬಿಡೋಣವೇ ಎಂದು ಎಣಿಸಿದ್ದೂ ಇದೆ. ಸತ್ತರೆ ಶವಗಳ ಊಳಲಾಗದಂತಹ ಈ ಜಾಗದಲ್ಲಿ ಸಾವಿನ ಭಯವೇ ಇಲ್ಲದೇ ಬದುಕಬಹುದೇನೂ ಎಂದು ಭಾವಿಸಿ ನಕ್ಕಿದ್ದಾಳೆ. ಸಾವಿನ ಬಗ್ಗೆ ಯೋಚಿಸಲು ತನಗೇನು ಅಷ್ಟು ವಯಸ್ಸಾಗಿದೆಯೇ? ಎಂದು ತನ್ನನ್ನು ತಾನು ಬೈದುಕೊಂಡೂ ಇದ್ದಾಳೆ. ಮಗಳಿಗೆ ಐದು ವರ್ಷವಾಗುವುದರೊಳಗೆ ಇನ್ನೊಂದು ಮದುವೆಯಾದರೆ ಹೇಗೆ? ಎಂಬ ಯೋಚನೆ ಅವಳನ್ನು ಮೊದಲ ಬಾರಿಗೆ ಅಪ್ಪಿಕೊಂಡು ಕಚಗುಳಿ ತಂದರೂ ಮರುಕ್ಷಣವೇ ಭಯವನ್ನು ತಂದಿತ್ತು. ತನ್ನ ಸಹೋದ್ಯೋಗಿ ಅಲೆಕ್ಸ್ ಆಂದ್ರೋವ್ ಅವಳ ಎದೆಯೆದುರಿಗೆ ಬಂದ.

ಆಂಡ್ರಿಯಾ ವೊಲ್ಕೊವಾ ಟಿ.ವಿ ನೋಡುತ್ತಿದ್ದಳು. ರಾತ್ರಿಯ (ಹೆಸರಿಗಷ್ಟೇ ರಾತ್ರಿ, ದಿನದ ಇಪ್ಪತ್ತಾಲ್ಕು ಗಂಟೆಗಳೂ ಇಲ್ಲಿ ರಾತ್ರಿಗಳೇ) ಊಟಕ್ಕೆ ಸಿದ್ಧ ಮಾಡಿಯೇ ಕೂತಿದ್ದಳು. ಅವಳಿಗೆ ಟರ್ಕಿಶ್ ಟಿ.ವಿ. ಸೀರಿಯಲ್‌ಗಳೆಂದರೆ ಪ್ರಾಣ. ಅವುಗಳನ್ನು ನೋಡುತ್ತಾ ಕೂತು ಬಿಟ್ಟರೆ ಊಟ ನಿದ್ರೆ ಯಾವುದೂ ಅವಳಿಗೆ ಬೇಕಾಗಿಲ್ಲ. ಈ ಕಾರಣಕ್ಕಾಗಿಯೇ ಅವಳು ಟರ್ಕಿಗೆ ಹೋಗಿ ತಿಂಗಳುಗಳ ಕಾಲ ಅಲೆದಿದ್ದಾಳೆ. ಪೂರ್ವದ ರಾಷ್ಟ್ರಗಳು ಅವಳೊಳಗೆ ಒಂದು ರೀತಿಯ ಪುಳಕ ತರುತ್ತವೆ. ಟಿ.ವಿ.ಯಲ್ಲಿ ಕಾಣುತ್ತಿರುವ ದಪ್ಪ ಮೀಸೆಯ, ಖಡಕ್ ಮುಖದ ಟರ್ಕಿಶ್ ಒಬ್ಬಾತ ಅವಳ ಕಣ್ಣುಗಳಿಗೆ ಅಲೆಕ್ಸ್ ಆಂದ್ರೋವ್‌ನಂತೆ ಕಂಡು ಬೆಚ್ಚಿಬಿದ್ದಳು. ಅಪ್ಪಿಕೊಂಡಿದ್ದ ಸೋಫಾ ದಿಂಬನ್ನು ದೂರ ಎಸೆದು ಟಿ.ವಿ.ಯನ್ನು ನಿಲ್ಲಿಸಿ ಪುಸ್ತಕ ಎತ್ತಿಕೊಂಡಾಗ ಯಾರೋ ಕಾಲಿಂಗ್ ಬೆಲ್ ಒತ್ತಿದರು. ದಡಕ್ಕನೆದ್ದು ತಬ್ಬಿಬ್ಬುಗೊಂಡು ಆಂಡ್ರಿಯಾ ಹಾಗೇ ಚಣ ನಿಂತಳು. ಇದುವರೆವಿಗೂ ಯಾರೂ ತನಗಿಲ್ಲಿ ತೊಂದರೆ ಕೊಟ್ಟಿಲ್ಲ. ಇದರ ಮಾಲೀಕ ಆಗಾಗ ಬಂದು ಗೆಸ್ಟ್‌ಗೆ ತೊಂದರೆ ಕೊಡುವುದಿಲ್ಲ ಎಂತಲ್ಲವೇ ಬುಕಿಂಗ್ ಡಾಟ್‌ಕಾಮ್‌ನಲ್ಲಿದ್ದುದು...

ಆಂಡ್ರಿಯಾ ತುಸು ಆತಂಕದಲ್ಲೇ ಬಾಗಿಲ ಬಳಿ ಹೋಗಿ 'ಊ ಈಸ್ ದ...?' ಎಂದು ರಾಗವಾಗಿ ರಷ್ಯನ್ ಧಾಟಿಯಲ್ಲಿ ಇಂಗ್ಲಿಷ್‌ನಲ್ಲಿ ಕೇಳಿದಳು. ಏನೊಂದೂ ಉತ್ತರವಿಲ್ಲ. ಇವಳು ಬಾಗಿಲಿಗೆ ಕಿವಿ ಕೊಟ್ಟು ಕೇಳಿಸಿಕೊಳ್ಳಲು ಯತ್ನಿಸಿದಳು. ಏನೊಂದೂ ಕೇಳುತ್ತಿಲ್ಲ. ಕಿಟಾರೆಂದು ಮತ್ತೊಮ್ಮೆ ಕಿರುಚಿಕೊಂಡ ಕಾಲಿಂಗ್ ಬೆಲ್ಲಿಗೆ ಬೆಚ್ಚಿ ಬಿದ್ದು ಥಟ್ಟನೆ ಬಾಗಿಲ ತೆಗೆದು ಹೊರಹೋದಳು. ಅತ್ತ ಇತ್ತ ಸುತ್ತಲೂ ತಿರುಗಿ ನೋಡಿದಳು. ಯಾರೂ ಕಾಣಿಸುತ್ತಿಲ್ಲ. ಮತ್ತೊಮ್ಮೆ ನೋಡಿದಳು, ಯಾರೊಬ್ಬರೂ ಇಲ್ಲ. ಭಯ ಮುತ್ತಿಕೊಂಡಿತು. ಮೇಲಿನ ಅಪಾರ್ಟ್‌ಮೆಂಟಿನವರನ್ನು ಕೇಳೋಣವೆಂದರೆ ಅವರನ್ನು ಅವಳು ಒಮ್ಮೆಯೂ ಮಾತಾಡಿಸಿಲ್ಲ... ಏನು ಮಾಡುವುದೆಂದು ತಿಳಿಯದೇ ಚಣ ಹಾಗೇ ನಿಂತು ಉಸಿರನ್ನು ದೀರ್ಘವಾಗಿ ಎಳೆದುಕೊಂಡು, ಏನೋ ತೀರ್ಮಾನ ಮಾಡಿಕೊಂಡ ಹುಮ್ಮಸ್ಸಿನಲ್ಲಿ ಒಳ ಹೋಗಿ ಬಾಗಿಲುಗಳನ್ನು ಭದ್ರವಾಗಿ ಚಿಲಕ ಮತ್ತು ಬೀಗ ಹಾಕಿ ತಿರುಗಿದಳು. ಕಿಟಾರನೇ ಕಿರುಚಿಕೊಂಡಳು.

ಸೋಫಾದಲ್ಲಿ ಒಬ್ಬಾತ ಕೂತಿದ್ದಾನೆ. ಆತ ಟಿ.ವಿ. ಆನ್ ಮಾಡಿಕೊಂಡು ನೋಡುತ್ತಾ ಏನೋ ಮಾತನಾಡುತ್ತಿದ್ದಾನೆ. ಆಂಡ್ರಿಯಾಳಿಗೆ ಜೀವ ಬಾಯಿಗೆ ಬಂದಂತಾಗಿ ಬಾಗಿಲ ತೆರೆದು ಹೊರಗೆ ಓಡಿದಳು. ಆ ಊರಲ್ಲಿ ಅವಳಿಗೆ ಯಾರೂ ಪರಿಚಯವಿಲ್ಲ. ಅಲ್ಲಿಗೆ ಬಂದ ದಿನ ಆ ಅಪಾರ್ಟ್‌ಮೆಂಟಿನ ಹೋಸ್ಟ್ ಜೊತೆ ಮೊಬೈಲ್‌ನಲ್ಲಿ ಮಾತನಾಡಿದ್ದಷ್ಟೆ. ಆತನಿಗೆ ಕರೆ ಮಾಡಿದಳು. ಆತನ ನಂಬರ್ ಸ್ವಿಚ್ ಆಫ್ ಆಗಿತ್ತು. ಹೊರಗೆ ಹಿಮ ಬೀಳುತ್ತಿದೆ. ಪೊಲೀಸ್‌ಗೆ ಕರೆ ಮಾಡೋಣವೆಂದರೆ ತುಸು ಭಯ... ಏನು ಮಾಡುವುದೆಂದು ಯೋಚಿಸಿ ಯೋಚಿಸಿ ಕೊನೆಗೆ ಧೈರ್ಯವಾಗಿ ಒಳಗೆ ಹೋದಳು. ಆತ ಗೆಸ್ಟ್ ಟಾಯ್ಲೆಟ್‌ನಲ್ಲಿ ಫ್ಲಶ್ ಮಾಡಿದ್ದು ಕೇಳಿಸಿತು. ಹೊರಗೆ ಬಂದು ಮತ್ತೆ ಸೋಫಾದಲ್ಲಿ ಕೂತ. ಆಂಡ್ರಿಯಾಳನ್ನು ನೋಡಿ ಏನೋ ಕೇಳಿದ. ಆತ ಮಾತನಾಡುತ್ತಿರುವ ಭಾಷೆ ಯಾವುದೆಂದೇ ಇವಳಿಗೆ ಗೊತ್ತಾಗಲಿಲ್ಲ. ಸ್ವಾಲ್‌ಬಾಡ್‌ನ ನಾರ್ವೇಜಿಯನ್ ಅಂತೂ ಅಲ್ಲ ಎನ್ನುವುದು ಅವಳಿಗೆ ಖಾತ್ರಿಯಿತ್ತು.

ಈತನ ಮುಖ ಚಹರೆ ನೋಡಿದರೆ ಯಾವುದೊ